ಸಂಖ್ಯೆ:ಮಾನಿಮಂ/ಪ್ರಾ.ಕ.(ದಾವಣ)/Taskforce/2018-19/ ದಿನಾಂಕ:

ದಿನಾಂಕ:23-02-2019 ರಂದು ಸಂಜೆ 04-00 ಗಂಟೆಗೆ ನಡೆದ ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ತುಂಗಭದ್ರ ನದಿಯು ಕಲುಷಿತಗೊಳ್ಳುವುದನ್ನು ನಿಯಂತ್ರಿಸಲು ಕಾರ್ಯಯೋಜನೆಯನ್ನು ರೂಪಿಸಲು ರಚಿಸಿರುವ District Level Special Environment Surveillance Task Force ಸಮಿತಿ ಸಭೆಯ ನಡುವಳಿಗಳು:

ಸಭೆಯಲ್ಲಿ ಭಾಗವಹಿಸಿದ ಅಧಿಕಾರಿಗಳು:

M. 1. ಶ್ರೀ ಜಿ.ಎನ್. ಶಿವಮೂರ್ತಿ, ಭಾ.ಅ.ಸೇ., ಮಾನ್ಯ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ.
2. ಶ್ರೀಮತಿ ಪದ್ಮ ಬಸವಂತಪ್ಪ, ಅಪರ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ.
M 3. ಶ್ರೀ ಆರ್. ಚೇತನ್, ಜಿಲ್ಲಾ ಪೊಲೀಸ್ ಅಧೀಕ್ಷಕರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ.
M 4. ಶ್ರೀ ಕೆಂಗಬಾಲಯ್ಯ, ಗೌರವಾನ್ವಿತ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ.
M 5. ಶ್ರೀ ಎಂ.ಎಸ್. ಮಹೇಶ್ವರಪ್ಪ, ಪರಿಸರ ಅಧಿಕಾರಿಗಳು (ಪ್ರಭಾರ), ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ.
6. ಶ್ರೀ ಕೆ.ಮಂಜುನಾಥ, ವೈಜ್ಞಾನಿಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ.
7. ಶ್ರೀಮತಿ ನಜ್ಮಾ, ಕ.ಆ.ಸೇ., ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ದಾವಣಗೆರೆ.
8. ಶ್ರೀ ವಿ.ಕೋದಂಡರಾಮಯ್ಯ, ಹಿರಿಯ ಭೂ ವಿಜ್ಞಾನಿಗಳು, ಹಿರಿಯ ಭೂ ವಿಜ್ಞಾನಿಗಳ (ಖನಿಜ) ಕಛೇರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ದಾವಣಗೆರೆ.
9. ಶ್ರೀ ಎಸ್.ಲಕ್ಷ್ಮೀ, ಆಯುಕ್ತರು, ನಗರಸಭೆ, ಹರಿಹರ.
10. ಶ್ರೀ ಎಸ್.ಸಿ. ಸುರೇಶ್, ಉಪ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ.
11. ಶ್ರೀ ಜಿ.ಎಂ. ಸುನಿಲ್, ಪರಿಸರ ಅಭಿಯಂತರರು, ಮಹಾನಗರ ಪಾಲಿಕೆ, ದಾವಣಗೆರೆ.
12. ಶ್ರೀ ಎಸ್.ಆರ್. ವೀರಭದ್ರಯ್ಯ, ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಹೊನ್ನಾಳಿ.
13. ಶ್ರೀ ಆರ್.ವಿ. ಪ್ರಸನ್ನ, ಸಹಾಯಕ ಕಾರ್ಯಪಾಲಕ ಅಭಿಯಂತರರು, DUDC, ದಾವಣಗೆರೆ.
14. ಶ್ರೀ ಕಡಬಾಳ ಮಹೇಶ್ವರ, ಪರಿಸರ ಅಭಿಯಂತರರು, ನಗರಸಭೆ, ಹರಿಹರ.
15. ಕಿರಿಯ ಅಭಿಯಂತರರು, ಪಟ್ಟಣ ಪಂಚಾಯಿತಿ, ಹೊನ್ನಾಳಿ.
16. ಶ್ರೀ ಎಂ.ಬಿ. ಗುರುಪ್ರಸಾದ್, ಹಿರಿಯ ಆರೋಗ್ಯ ನಿರೀಕ್ಷಕರು, ಟಿ.ಎಂ.ಸಿ., ಮಲೆಬೇನ್ನೂರು, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.
17. ಶ್ರೀ ಬಸವಣ್ಣ, ಪರಿಸರ ಅಭಿಯಂತರರು, ಮಹಾನಗರ ಪಾಲಿಕೆ, ದಾವಣಗೆರೆ.

<<<< 0 >>>>

ಪ್ರಸ್ತಾವನೆ:-

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ವರದಿಯ ಪ್ರಕಾರ ಘನ ಹಸಿರು ನ್ಯಾಯಾಧೀಕರಣ, ಪ್ರಧಾನ ಪೀಠ, ನವದೆಹಲಿಯ ಇವರು ಕರ್ನಾಟಕ ರಾಜ್ಯ 17 ನದಿಯ ದಡಗಳು ಕಲುಷಿತಗೊಂಡಿವೆ ಎಂದು ನಿರ್ದರಿಸಿರುತ್ತದೆ. ಘನ ಹಸಿರು ನ್ಯಾಯಾಧೀಕರಣ, ಪ್ರಧಾನ ಪೀಠ, ನವದೆಹಲಿಯ ಅರ್ಜಿ ಸಂಖ್ಯೆ: No.673/2018 dated 20th September 2018 ರ ಸೂಚನೆಯ ಪ್ರಕಾರ ರಾಜ್ಯದ 17 ನದಿ ತೀರಗಳು ಕಲುಷಿತಗೊಳ್ಳುತ್ತಿರುವುದನ್ನು ನಿಯಂತ್ರಿಸಲು ಕಾರ್ಯಯೋಜನೆಯನ್ನು ತಯಾರಿಸುವ ಸಲುವಾಗಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ''State Level River Rejuvenation Committee'' ಯನ್ನು ರಚಿಸಲಾಗಿರುತ್ತದೆ. ಅದರಂತೆ ಕರ್ನಾಟಕ ರಾಜ್ಯ ಸರ್ಕಾರದ ಆದೇಶ ಸಂಖ್ಯೆ:No.FEE 214 EPC 2018, Bengaluru, Dated:03.01.2019 ರ ಪ್ರಕಾರ ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಘನ ನ್ಯಾಯಾಧೀಶರು ಮತ್ತು ಪ್ರಾದೇಶಿಕ ಅಧಿಕಾರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳನ್ನೊಳಗೊಂಡ "District Level Special Environment Surveillance Task Force" ಸಮಿತಿಯನ್ನು ರಚಿಸಿರುತ್ತದೆ. ಅದರಂತೆ ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ತುಂಗಭದ್ರ ನದಿಯು (ಹರಿಹರ- ಹರಳಹಳ್ಳಿ ಸೇತುವೆ ನಡುವಿನ ಅಂತರದಲ್ಲಿ) ಕಲುಷಿತಗೊಳ್ಳುವುದನ್ನು ನಿಯಂತ್ರಿಸಲು ಕಾರ್ಯಯೋಜನೆಯನ್ನು

ರೂಪಿಸಲು "District Level Special Environment Surveillance Task Force" ಸಮಿತಿ ಸಭೆಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಯು ದಾವಣಗೆರೆ ಜಿಲ್ಲಾ ವ್ಯಾಪ್ತಿಯ ತುಂಗಭದ್ರ ನದಿಯು (ಹರಿಹರ-ಹರಳಹಳ್ಳಿ ಸೇತುವೆ ನಡುವಿನ ಅಂತರದಲ್ಲಿ) ಮಾಲಿನ್ಯವಾಗದಂತೆ ಸಂಬಂಧಿಸಿದ ಇಲಾಖೆಗಳೊಂದಿಗೆ ಚರ್ಚಿಸಿ ಕಾರ್ಯಯೋಜನೆಯನ್ನು ರೂಪಿಸುವುದು, ತುಂಗಭದ್ರ ನದಿಯನ್ನು ಮಾಲಿನ್ಯವನ್ನುಂಟು ಮಾಡುವ ಸಂಸ್ಥೆ/ಸ್ಥಳೀಯ ಸಂಸ್ಥೆ/ಕಾರ್ಖಾನೆ/ಘಟಕಗಳನ್ನು ಗುರುತಿಸುವುದು ಹಾಗೂ ತುಂಗಭದ್ರ ನದಿಯು ಕಲುಷಿತಗೊಂಡಿರುವ ಪ್ರದೇಶದಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಯದಂತೆ ಕ್ರಮಕೈಗೊಳ್ಳುವ ಬಗ್ಗೆ ಚರ್ಚಿಸುವ ಸಲುವಾಗಿ ಸದರಿ ಸಮಿತಿ ಸಭೆಯನ್ನು ಕರೆಯಲಾಗಿರುತ್ತದೆ.

ಸಮಿತಿ ಸದಸ್ಯ ಸಂಚಾಲಕರಾದ ಶ್ರೀ ಎಂ.ಎಸ್. ಮಹೇಶ್ವರಪ್ಪ, ಪರಿಸರ ಅಧಿಕಾರಿಗಳು (ಪ್ರಭಾರ), ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ ಇವರು ದಾವಣಗೆರೆ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ತುಂಗಭದ್ರ ನದಿಯು (ಹರಿಹರ-ಹರಳಹಳ್ಳಿ ಸೇತುವೆ ನಡುವಿನ ಅಂತರದಲ್ಲಿ) ಕಲುಷಿಗೊಳ್ಳುವುದನ್ನು ನಿಯಂತ್ರಿಸಲು ಕಾರ್ಯಯೋಜನೆಯನ್ನು ರೂಪಿಸುವ ಸಲುವಾಗಿ ರಚಿಸಲಾದ ಸಮಿತಿ ಸಭೆಯಲ್ಲಿ ಹಾಜರಿದ್ದ, ಮಾನ್ಯ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ, ಜಿಲ್ಲಾ ಪೊಲೀಸ್ ಅಧೀಕ್ಷಕರು, ದಾವಣಗೆರೆ ಜಿಲ್ಲೆ, ದಾವಣಗೆರೆ, ಗೌರವಾನ್ವಿತ ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ದಾವಣಗೆರೆ, ಅಪರ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ಮತ್ತು ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ದಾವಣಗೆರೆ ಹಾಗೂ ಸಭೆಯಲ್ಲಿ ಹಾಜರಿದ್ದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸುತ್ತಾ, ಸದರಿ ಸಮಿತಿ ಸಭೆಯನ್ನು ನಡೆಸಿಕೊಡುವಂತೆ ಸಮಿತಿ ಅಧ್ಯಕ್ಷರಾದ ಮಾನ್ಯ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರಲ್ಲಿ ಕೋರಿದರು ಹಾಗೂ ಈ ಕೆಳಗಿನ ಅಂಶಗಳನ್ನು ಚರ್ಚಿಸಲಾಯಿತು.

ಶ್ರೀ ಎಂ.ಎಸ್. ಮಹೇಶ್ವರಪ್ಪ, ಪರಿಸರ ಅಧಿಕಾರಿಗಳು (ಪ್ರಭಾರ), ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ದಾವಣಗೆರೆ ಇವರು ಸಭೆಯಲ್ಲಿ ಮಾತನಾಡುತ್ತಾ, ಹರಿಹರ ಮತ್ತು ಹೊನ್ನಾಳಿ ಸ್ಥಳೀಯ ಸಂಸ್ಥೆಗಳು ತ್ಯಾಜ್ಯ ನೀರನ್ನು ಸಂಸ್ಕರಿಸದೇ ನೇರವಾಗಿ ತುಂಗಭದ್ರ ನದಿಗೆ ಬಿಡುತ್ತಿರುತ್ತಾರೆ. ಹೊನ್ನಾಳಿ ಪಟ್ಟಣ ಪಂಚಾಯಿತಿಯು ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಹೊಂದಿರುವುದಿಲ್ಲ. ಹೊನ್ನಾಳಿ ಪಟ್ಟಣದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರು ನೇರವಾಗಿ ತುಂಗಭದ್ರ ನದಿಗೆ ಸೇರುತ್ತಿರುತ್ತದೆ. ಹರಿಹರ ನಗರಸಭೆಯು ಹಳೆಯ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ನಿಷ್ಕ್ರೀಯಗೊಳಿಸಿರುತ್ತಾರೆ. 18 ಎಂಎಲ್‌ಡಿ ಸಾಮಾರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ನಿರ್ಮಿಸಿರುತ್ತಾರೆ. ಹರಿಹರ ಪಟ್ಟಣದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಣಾ ಘಟಕದಲ್ಲಿ ಸಂಸ್ಕರಿಸದೇ ನೇರವಾಗಿ ತುಂಗಭದ್ರ ನದಿಗೆ ಬಿಡುತ್ತಿರುತ್ತಾರೆ. ದಾವಣಗೆರೆ ನಗರದಲ್ಲಿ ಉತ್ಪತ್ತಿಯಾಗುವ 70% ತ್ಯಾಜ್ಯ ನೀರನ್ನು ಸಂಸ್ಕರಣಾ ಘಟಕದಲ್ಲಿ ಸಂಸ್ಕರಿಸಿರುತ್ತಿರುತ್ತಾರೆ ಉಳಿದ ತ್ಯಾಜ್ಯ ನೀರನ್ನು ಸಾರಥಿ ಹಳ್ಳದ ಮುಖಾಂತರ ತುಂಗಭದ್ರ ನದಿಗೆ ಬಿಡುತ್ತಿರುತ್ತಾರೆ. ದಾವಣಗೆರೆ ನಗರದಲ್ಲಿ ಸುಮಾರು 70% ಒಳಚರಂಡಿ ವ್ಯವಸ್ಥೆಯನ್ನು ಹೊಂದಿರುತ್ತಾರೆ, ಹರಿಹರ ಪಟ್ಟಣದಲ್ಲಿ ಸುಮಾರು 50% ಒಳಚರಂಡಿ ವ್ಯವಸ್ಥೆಯನ್ನು ಹೊಂದಿರುತ್ತಾರೆ ಮತ್ತು ಹೊನ್ನಾಳಿ ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಹೊಂದಿರುವುದಿಲ್ಲ. ಹರಿಹರ ನಗರದ ತುಂಗಭದ್ರ ನದಿಯ ದಡದಲ್ಲಿ ಯತೇಚ್ಛವಾಗಿ ವಾಹನಗಳನ್ನು ತೊಳೆಯುತ್ತಿರುತ್ತಾರೆ. ತುಂಗಭದ್ರ ನದಿಯ ದಡಲ್ಲಿರುವ ನಗರ/ಪಟ್ಟಣ/ಗ್ರಾಮಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರು ನೇರವಾಗಿ ತುಂಗಭದ್ರ ನದಿಗೆ ಸೇರುತ್ತಿರುವುದರಿಂದ ನದಿಯ ನೀರು ಕಲುಷಿತಗೊಳ್ಳುವ ಸಾಧ್ಯತೆ ಇರುತ್ತದೆ. ತುಂಗಭದ್ರ ನದಿಯ ದಡದಲ್ಲಿರುವ ಮೆ॥ಗ್ರಾಸಿಂ ಇಂಡಸ್ಟ್ರೀಸ್ ಲಿ., ಕುಮಾರಪಟ್ಟಣಂ ಇವರು ಮೆ॥ಹರಿಹರ ಪಾಲಿಫೈಬರ್ಸ್ ಲಿ. ಮತ್ತು ಗ್ರಾಸಲೀನ್ ಡಿವಿಜನ್ ಕಾರ್ಖಾನೆಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಪ್ರತ್ಯೇಕ ಸಂಸ್ಕರಣಾ ಘಟಕಗಳಲ್ಲಿ ಸಂಸ್ಕರಿಸಿ ಮಿಶ್ರಣಗೊಳಿಸಿ ತುಂಗಭದ್ರ ನದಿಗೆ ಬಿಡುತ್ತಿರುತ್ತಾರೆ. ಮಂಡಳಿವತಿಯಿಂದ ತುಂಗಭದ್ರ ನದಿಗೆ ಸೇರುವ ಮಿಕ್ಸಡ್ ಸಂಸ್ಕರಿಸಿದ ತ್ಯಾಜ್ಯ ನೀರಿನ ಮಾದರಿಗಳನ್ನು ಸಂಗ್ರಹಿಸಿ ಮಂಡಳಿಯ ಪ್ರಯೋಗಶಾಲೆಯಲ್ಲಿ ವಿಶ್ಲೇಷಣೆಯನ್ನು ನಡೆಸಲಾಗುತ್ತಿರುತ್ತದೆ. ಸದರಿ ಮಾದರಿಗಳ ವಿಶ್ಲೇಷಣಾ ವರದಿಗಳ ಪ್ರಕಾರ ಮಂಡಳಿಯು ನಿಗದಿಪಡಿಸಿದ ಮಾನಕಗಳಿಗೆ ಅನುಗುಣವಾಗಿರುತ್ತದೆ. ಸದರಿ ಕಾರ್ಖಾನೆಯವರಿಗೆ ಸಂಸ್ಕರಿಸಿದ ತ್ಯಾಜ್ಯ ನೀರನ್ನು ತುಂಗಭದ್ರ ನದಿಗೆ ಬಿಡುವ ಪ್ರಮಾಣವನ್ನು ಕಡಿಮೆ ಮಾಡಿಕೊಳ್ಳುವಂತೆ ಅಥವಾ ಸಂಸ್ಕರಿಸಿದ ತ್ಯಾಜ್ಯ ನೀರನ್ನು ತುಂಗಭದ್ರ ನದಿಗೆ ಬಿಡದಂತೆ ಸೂಚಿಸಲಾಗಿರುತ್ತದೆ. ಅದರಂತೆ ಸದರಿ ಕಾರ್ಖಾನೆಯವರು ಸುಮಾರು 33% ಪ್ರಮಾಣವನ್ನು ಕಡಿಮೆಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಸದರಿ ಕಾರ್ಖಾನೆಯವರು ಇನ್ನೂ 3 ತಿಂಗಳಲ್ಲಿ Zero Liquid Discharge ಬಗ್ಗೆ ಕಾರ್ಯಯೋಜನೆಯನ್ನು ಸಲ್ಲಿಸುವುದಾಗಿ ತಿಳಿಸಿರುತ್ತಾರೆ ಎಂದು ಸಭೆಗೆ ವಿವರಿಸಿದರು.

ಮಾನ್ಯ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳನ್ನು ಪರಿಚಯಿಸಿಕೊಳ್ಳುತ್ತಾ, ತುಂಗಭದ್ರ ನದಿ ಕಲುಷಿತಗೊಳ್ಳುವುದನ್ನು ನಿಯಂತ್ರಿಸುವ ಕಾರ್ಯದಲ್ಲಿ ಸ್ಥಳೀಯ ಸಂಸ್ಥೆಗಳು ಸಹ ಕೈಜೋಡಿಸಬೇಕಾಗಿರುತ್ತದೆ. ಸಭೆಯ ಕಾರ್ಯಸೂಚಿಗಳಲ್ಲಿರುವ ವಿಷಯಗಳ ಕುರಿತು ಸಭೆಯಲ್ಲಿ ಹಾಜರಿದ್ದ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಿಗೆ ತೆಗೆದುಕೊಂಡ ಕ್ರಮದ ಬಗ್ಗೆ ವಿವರಿಸುವಂತೆ ಸೂಚಿಸಿದರು.

**1. ಶ್ರೀ ಜಿ.ಎಂ. ಸುನಿಲ್, ಪರಿಸರ ಅಭಿಯಂತರರು, ಮಹಾನಗರ ಪಾಲಿಕೆ, ದಾವಣಗೆರೆ:**

1. ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಒಟ್ಟು ನಾಲ್ಕು ರೊಚ್ಚು ನೀರು ಸಂಸ್ಕರಣಾ ಘಟಕಗಳಿರುತ್ತವೆ. ನಾಲ್ಕು ಸಂಸ್ಕರಣಾ ಘಟಕಗಳಿಗೆ ಮಂಡಳಿಯಿಂದ ಸ್ಥಾಪನಾ ಸಮ್ಮತಿ ಪತ್ರವನ್ನು ಪಡೆಯಲಾಗಿರುತ್ತದೆ. 4 ಸಂಸ್ಕರಣಾ ಘಟಕಗಳು ಕಾರ್ಯನಿರ್ವಹಿಸುತ್ತಿರುತ್ತವೆ. ದಾವಣಗೆರೆ ನಗರದ ಭಾಗಶಃ ಒಳಚರಂಡಿಗಳನ್ನು ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಿಗೆ ಸಂಪರ್ಕ ಕಲ್ಪಿಸಲಾಗಿರುತ್ತದೆ.
2. ದಾವಣಗೆರೆ ನಗರದ ಎಲ್ಲಾ ವಾರ್ಡ್‌ಗಳಲ್ಲಿ ಬಹುತೇಕ ಒಳಚರಂಡಿ ವ್ಯವಸ್ಥೆಯಿರುತ್ತದೆ. ಒಳಚರಂಡಿ ವ್ಯವಸ್ಥೆ ಇಲ್ಲದ ವಾರ್ಡ್‌ಗಳಲ್ಲಿ ಒಳಚರಂಡಿ ಕಾಮಗಾರಿಯು ನಡೆಯುತ್ತಿರುತ್ತದೆ. ಕಾಮಗಾರಿ ಮುಗಿದ ನಂತರ ದಾವಣಗೆರೆ ನಗರದಲ್ಲಿ ಉತ್ಪತ್ತಿಯಾಗುವ ಗೃಹ ಬಳಕೆಯ ತ್ಯಾಜ್ಯ ನೀರನ್ನು ಸಂಪೂರ್ಣವಾಗಿ ರೊಚ್ಚು ನೀರು ಸಂಸ್ಕರಣಾ ಘಟಕಗಳಿಗೆ ಸಂಪರ್ಕ ಕಲ್ಪಿಸಲಾಗುವುದು.
3. ದಾವಣಗೆರೆ ನಗರದ ಕೊಳಚೆ ಪ್ರದೇಶದಲ್ಲಿರುವ ವಾಸದ ಮನೆಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಹ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಸಂಪರ್ಕ ಕಲ್ಪಿಸಲಾಗಿರುತ್ತದೆ.

**2. ಶ್ರೀಮತಿ ಲಕ್ಷ್ಮೀ, ಆಯುಕ್ತರು, ನಗರಸಭೆ, ಹರಿಹರ:**

1. ಹರಿಹರ ನಗರದಲ್ಲಿ ಉತ್ಪತ್ತಿಯಾಗುವ ಗೃಹ ಬಳಕೆಯ ರೊಚ್ಚು ನೀರನ್ನು ಸಂಸ್ಕರಿಸಲು 18 ಎಂ.ಎಲ್.ಡಿ ಸಾಮಾರ್ಥ್ಯದ ಸಂಸ್ಕರಣಾ ಘಟಕ ಸ್ಥಾಪಿಸಲು ಮಂಡಳಿಯಿಂದ ಸಮ್ಮತಿ ಪತ್ರವನ್ನು ಪಡೆಯಲಾಗಿರುತ್ತದೆ. ಸದರಿ ಸಂಸ್ಕರಣಾ ಘಟಕದ ಕಾಮಗಾರಿಯು ಪ್ರಗತಿ ಹಂತದಲ್ಲಿರುತ್ತದೆ. ಸದರಿ ಸಂಸ್ಕರಣಾ ಘಟಕವನ್ನು ಇನ್ನೂ 2 ತಿಂಗಳಲ್ಲಿ ಕಾರ್ಯಾರಾಂಭ ಮಾಡಲಾಗುವುದು.
2. ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಒಳ ಚರಂಡಿ ವ್ಯವಸ್ಥೆಯ ಕಾಮಗಾರಿಯು ಮುಕ್ತಾಯ ಹಂತದಲ್ಲಿರುತ್ತದೆ.
3. ಹರಿಹರ ನಗರದಲ್ಲಿ ಮ್ಯಾನ್ಸ ಹೋಲ್‌ಗಳನ್ನು ನಿರ್ಮಿಸಿದ್ದು, ಮನೆಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಚರಂಡಿಗಳಿಗೆ ಸಂಪರ್ಕ ಕಲ್ಪಿಸಲಾಗುವುದು.
4. ಹರಿಹರ ನಗರದ ಕೊಳಗೇರಿಗಳಲ್ಲಿ ಸೆಪ್ಟಿಕ್ ಟ್ಯಾಂಕ್‌ಗಳನ್ನು ನಿರ್ಮಿಸಲಾಗಿರುತ್ತದೆ.
5. ಮಾರ್ಚ್-2019 ರ ಕೊನೆಯ ಹಂತಕ್ಕೆ ಹರಿಹರ ನಗರದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಒಳಚರಂಡಿ ವ್ಯವಸ್ಥೆಯ ಮೂಲಕ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಸಂಪರ್ಕ ಕಲ್ಪಿಸಿ ತ್ಯಾಜ್ಯ ನೀರನ್ನು ಸಂಸ್ಕರಿಸಿ ತುಂಗಭದ್ರ ನದಿಗೆ ಬಿಡಲಾಗುವುದು.

**3. ಶ್ರೀ ಎಸ್.ಆರ್. ವೀರಭದ್ರಯ್ಯ, ಮುಖ್ಯಾಧಿಕಾರಿಗಳು, ಪಟ್ಟಣ ಪಂಚಾಯಿತಿ, ಹೊನ್ನಾಳಿ.**

1. ಹೊನ್ನಾಳಿ ಪಟ್ಟಣದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಲು ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ನಿರ್ಮಿಸಿದ್ದು, ಪಟ್ಟಣದಲ್ಲಿ ನಡೆಯುತ್ತಿರುವ ಒಳಚರಂಡಿ ವ್ಯವಸ್ಥೆಯನ್ನು ಇನ್ನೂ 4 ತಿಂಗಳುಗಳಲ್ಲಿ ಪೂರ್ಣಗೊಳಿಸಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಸಂಪರ್ಕ ಕಲ್ಪಿಸಲಾಗುವುದು.
2. ಹೊನ್ನಾಳಿ ಪಟ್ಟಣದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಒಳಚರಂಡಿ ವ್ಯವಸ್ಥೆಯ ಮುಖಾಂತರ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ ಸಂಪರ್ಕ ಕಲ್ಪಿಸುವ ಕಾರ್ಯವು ಪ್ರಗತಿ ಹಂತದಲ್ಲಿರುತ್ತದೆ.

4. **ಶ್ರೀ ಎಂ.ಬಿ. ಗುರುಪ್ರಸಾದ್, ಹಿರಿಯ ಆರೋಗ್ಯ ನಿರೀಕ್ಷಕರು, ಟಿ.ಎಂ.ಸಿ., ಮಲೆಬೇನ್ನೂರು, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.**

   1. ಮಲೆಬೇನ್ನೂರು ಪಟ್ಟಣದಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಲು ತ್ಯಾಜ್ಯ ನೀರು ಸಂಸ್ಕರಣಾ ಘಟಕವನ್ನು ಸ್ಥಾಪಿಸಲು ಜಾಗವನ್ನು ಆದಷ್ಟೋ ಬೇಗನೆ ಗುರುತಿಸಿ ಮಂಡಳಿಯಿಂದ ಸ್ಥಾಪನಾ ಸಮ್ಮತಿ ಪತ್ರ ಪಡೆಯಲಾಗುವುದು.
   2. ಮಲೆಬೇನ್ನೂರು ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆ ಇರುವುದಿಲ್ಲ. ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ನಿರ್ಮಿಸಲು ಕ್ರಮಕೈಗೊಳ್ಳಲಾಗುವುದು.

5. **ಶ್ರೀ ವಿ. ಕೋದಂಡರಾಮಯ್ಯ, ಹಿರಿಯ ಭೂ ವಿಜ್ಞಾನಿಗಳು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ದಾವಣಗೆರೆ.**

   1. ತುಂಗಭದ್ರ ನದಿಯ ದಡದಲ್ಲಿ ನಡೆಯುವ ಮರಳು ಗಣಿಗಾರಿಕೆಯನ್ನು ಪ್ರತಿ ವಾರ ಇಲಾಖೆಯವತಿಯಿಂದ ಪರಿವೀಕ್ಷಣೆ ನಡೆಸಲಾಗುತ್ತಿರುತ್ತದೆ.
   2. ತುಂಗಭದ್ರ ನದಿಯ ದಡದಲ್ಲಿ ಅಕ್ರಮ ಮರಳು ಗಣಿಗಾರಿಕೆ ನಡೆಯುತ್ತಿರುವುದಿಲ್ಲ.
   3. ತುಂಗಭದ್ರ ನದಿಯ ದಡದಲ್ಲಿ ಮರಳು ಗಣಿಗಾರಿಕೆಯನ್ನು ಜೆಸಿಬಿ ಯಂತ್ರದಿಂದ ನಡೆಸದಂತೆ ಪರಿವೀಕ್ಷಣೆ ಸಮಯದಲ್ಲಿ ಸೂಚಿಸಲಾಗುತ್ತಿರುತ್ತದೆ.

**ಶ್ರೀ ಜಿ.ಎನ್. ಶಿವಮೂರ್ತಿ, ಭಾ.ಆ.ಸೇ., ಮಾನ್ಯ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ ಇವರು ಸಭೆಯಲ್ಲಿ ಮಾತಾನಾಡುತ್ತಾ,**

ದಾವಣಗೆರೆ ಜಿಲ್ಲೆಯಲ್ಲಿರುವ ನಗರ ಪಟ್ಟಣಗಳಲ್ಲಿ ಒಳಚರಂಡಿ ವ್ಯವಸ್ಥೆಯನ್ನು ವ್ಯವಸ್ಥಿತವಾಗಿ ನಿರ್ಮಿಸಿಕೊಳ್ಳವುಚು, ತ್ಯಾಜ್ಯ ನೀರು ನದಿ ಹಳ್ಳ-ಕೊಳ್ಳಗಳಿಗೆ ಸೇರದಂತೆ ಕ್ರಮಕೈಗೊಳ್ಳುವುದು. ತ್ಯಾಜ್ಯ ನೀರನ್ನು ಸಂಸ್ಕರಿಸಲು ಸಂಸ್ಕರಣಾ ಘಟಕಗಳನ್ನು ಆದಷ್ಟೋ ಬೇಗನೆ ಸ್ಥಾಪಿಸಿಕೊಳ್ಳುವುದು, ನದಿ ದಡದಲ್ಲಿ ಎಲ್ಲಾ ರೀತಿಯ ವಾಹನಗಳನ್ನು ತೊಳೆಯುವುದನ್ನು ನಿಯಂತ್ರಿಸಲು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯವರು ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ತುಂಗಭದ್ರ ನದಿಗೆ ಗ್ರಾಮಗಳಿಂದ ಉತ್ಪತ್ತಿಯಾಗುವ ತ್ಯಾಜ್ಯ ನೀರು ನದಿಗೆ ಸೇರುತ್ತಿರುವ ಗ್ರಾಮಗಳನ್ನು ಗುರುತಿಸುವುದು. ತುಂಗಭದ್ರ ನದಿಯ ದಡದಲ್ಲಿರುವ ಗ್ರಾಮಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸೂಚಿಸಿದರು. ಸದರಿ ಸಮಿತಿ ಮುಂದಿನ ಸಭೆಗಳಲ್ಲಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ದಾವಣಗೆರೆ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ದಾವಣಗೆರೆ, ಹರಿಹರ, ಹೊನ್ನಾಳಿ, ಕೊಳಚೆ ನಿರ್ಮೂಲನಾ ಮಂಡಳಿಯ ಅಧಿಕಾರಿಗಳು, KUWS & KUDFC ಅಧಿಕಾರಿಗಳು, ತುಂಗಭದ್ರ ನದಿಯ ದಡದಲ್ಲಿ ಬರುವ ಗ್ರಾಮ ಪಂಚಾಯಿತಿಯ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ತುಂಗಭದ್ರ ನದಿಯ ದಡದಲ್ಲಿರುವ ಮೆ||ಗ್ರಾಸಿಂ ಇಂಡಸ್ಟ್ರೀಸ್ ಲಿಮಿಟೆಡ್‌ನ ಮುಖ್ಯಸ್ಥರನ್ನು ಸಭೆಗೆ ಕರೆಸುವಂತೆ ಮೌಖಿಕವಾಗಿ ಸೂಚಿಸಿದರು. ಸದರಿ ಟಾಸ್ಕ್ ಫೋರ್ಸ್ ಸಮಿತಿ ಸಭೆಗೆ ಪ್ರತಿನಿಧಿಗಳನ್ನು ನಿಯೋಜಿಸದೆ ಕಛೇರಿಯ ಮುಖ್ಯಸ್ಥರು ಕಡ್ಡಾಯವಾಗಿ ಹಾಜರಾಗಲು ಸೂಚಿಸಿದರು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು,
District Level Special Environment
Task Force Committee
ದಾವಣಗೆರೆ ಜಿಲ್ಲೆ.